## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ 3ನೇ ಕಂತಿನ ಅನುದಾನವನ್ನು 25 ಜಿಲ್ಲಾ ಪಂಚಾಯಿತಿಗಳಿಗೆ ಮತ್ತು 4ನೇ ಕಂತಿನ ಅನುದಾನವನ್ನು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ಪಂಚಾಯತ್ ರಾಜ್ ಆಯುಕ್ತಾಲಯದ ಆದೇಶ ಸಂಖ್ಯೆ:ಕೆಪಿಆರ್ ಸಿ/ಡಿಡಿ4ಪಿಬಿ/1/2022, ದಿನಾಂಕ:12-07-2022.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 409 ಜಿಪಸ 2022, ದಿನಾಂಕ: 13-09-2022.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 409 ಜಿಪಸ 2022, ದಿನಾಂಕ: 06-02-2023.
4. ಪಂಚಾಯತ್ ರಾಜ್ ಆಯುಕ್ತಾಲಯದ ಕಡತ ಸಂಖ್ಯೆ:ಕೆಪಿಆರ್‌ಸಿ/ ಡಿಡಿ40ಪಿಬಿ/1/2022.

*******

**ಪ್ರಸ್ತಾವನೆ:**

2022-23ನೇ ಸಾಲಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ:2515-00-101-0-29(ಲಿಂಕ್ ಕೋಡ್:2515-00-196-1-14)ರ ಆಯವ್ಯಯದಡಿ ರೂ.4699.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ(1) ಹಾಗೂ (2)ರ ಆದೇಶಗಳನ್ವಯ 2022-23ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ:2515-00-101-0-29(ಲಿಂಕ್ ಕೋಡ್: 2515-00-196-1-14)ರಡಿ ನಿಗಧಿಪಡಿಸಲಾದ ಅನುದಾನದಲ್ಲಿ ಮೊದಲನೇ ಕಂತು ರೂ.1174.75ಲಕ್ಷಗಳು ಮತ್ತು 2ನೇ ಕಂತು ರೂ.1174.75ಲಕ್ಷಗಳ ಅನುದಾನವನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಮೇಲೆ ಓದಲಾದ(3)ರ ಆದೇಶದನ್ವಯ ಶೇ.75 ರಷ್ಟು ವೆಚ್ಚಗೊಳಿಸಿರುವ 06 ಜಿಲ್ಲಾ ಪಂಚಾಯಿತಿಗಳಿಗೆ ಮಾತ್ರ 3ನೇ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಮೇಲೆ ಓದಲಾದ(4)ರ ಆಯುಕ್ತಾಲಯದ ಕಡತದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯಡಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಮುಂದುವರೆದ/ಪೂರ್ಣಗೊಂಡ ಕಾಮಗಾರಿಗಳ ನಿರ್ಮಾಣಕ್ಕಾಗಿ 2022-23ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ:2515-00-101-0-29(ಲಿಂಕ್ ಕೋಡ್ :2515-00-196-1-14)ರಡಿ ನಿಗಧಿಪಡಿಸಲಾದ ರೂ.4699.00ಲಕ್ಷಗಳ ಅನುದಾನದಲ್ಲಿ ಮೂರನೇ ಕಂತಿನ



Generated from eOffice by sateesh kumar k n, KPRC-SDA(SKN), SECOND DIVISION ASSISTANT, KPRC on 13/04/2023 04:36 PM

ಅನುದಾನ ರೂ.937.25(ಒಂಭೈನೂರ ಮೂವತ್ತೇಳು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಲಕ್ಷಗಳನ್ನು 25 ಜಿಲ್ಲಾ ಪಂಚಾಯಿತಿಗಳಿಗೆ ಮತ್ತು 4ನೇ ಕಂತಿನ ಅನುದಾನ ರೂ.1174.75(ಒಂದು ಸಾವಿರದ ಒಂದು ನೂರ ಎಪ್ಪತ್ತನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಲಕ್ಷಗಳನ್ನು ಎಲ್ಲಾ 31 ಜಿಲ್ಲಾ ಪಂಚಾಯತ್ ಗಳಿಗೆ ಅನುಬಂಧದನ್ವಯ ಬಿಡುಗಡೆಗೊಳಿಸಲು ನಿರ್ಧರಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 409 ಜಿಪಸ 2022, ಬೆಂಗಳೂರು, ದಿನಾಂಕ:08-03-2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯಡಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಮುಂದುವರೆದ/ಪೂರ್ಣಗೊಂಡ ಕಾಮಗಾರಿಗಳ ನಿರ್ಮಾಣಕ್ಕಾಗಿ 2022-23ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ:2515-00-101-0-29(ಲಿಂಕ್ ಕೋಡ್: 2515-00-196-1-14)ರಡಿ ನಿಗಧಿಪಡಿಸಲಾದ ಒಟ್ಟಾರೆ ರೂ.4699.00ಲಕ್ಷಗಳ ಅನುದಾನದಲ್ಲಿ ಮೂರನೇ ಕಂತಿನ ಅನುದಾನ ರೂ.937.25(ಒಂಭೈನೂರ ಮೂವತ್ತೇಳು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಲಕ್ಷಗಳನ್ನು 25 ಜಿಲ್ಲಾ ಪಂಚಾಯಿತಿಗಳಿಗೆ ಹಾಗೂ ನಾಲ್ಕನೇ ಕಂತಿನ ಅನುದಾನ ರೂ.1174.75(ಒಂದು ಸಾವಿರದ ಒಂದು ನೂರ ಎಪ್ಪತ್ತನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಲಕ್ಷಗಳನ್ನು ಎಲ್ಲಾ 31 ಜಿಲ್ಲಾ ಪಂಚಾಯತ್ ಗಳಿಗೆ ಇದರೊಂದಿಗೆ ಲಗತ್ತಿಸಲಾದ **ಅನುಬಂಧದಂತೆ** ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಖಜಾನೆ-2ರ ಮೂಲಕ ಈ ಕೆಳಕಂಡ ಷರತ್ತುಗಳನ್ವಯ ಬಿಡುಗಡೆಗೊಳಿಸಿ ಆದೇಶಿಸಿದೆ.

**ಸದರಿ ಅನುದಾನವನ್ನು ವಿನಿಯೋಗಿಸುವ ಸಂದರ್ಭದಲ್ಲಿ ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದು.**

1. 2022-23ನೇ ಸಾಲಿನಲ್ಲಿ ಜಿಲ್ಲೆಗೆ ನಿಗಧಿಪಡಿಸಿದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯ ಅನುಮೋದನೆ ಪಡೆದ ಹಾಗೂ ಸರ್ಕಾರದ ಮಂಜೂರಾತಿ ಪಡೆದ ಕಾಮಗಾರಿಗಳಿಗೆ ಮಾತ್ರ ವೆಚ್ಚ ಮಾಡತಕ್ಕದ್ದು.
2. ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡದ ನಿರ್ಮಾಣ ಯೋಜನೆಯಡಿ ನಿಗಧಿಪಡಿಸಿದ ಆರ್ಥಿಕ ಗುರಿ ಹಾಗೂ ಭರಿಸಲಾದ ವೆಚ್ಚವನ್ನು ನಿಗಧಿತ ಸಮಯದಲ್ಲಿ ಅವಲೋಕನ ತಂತ್ರಾಂಶದಡಿ ಇಂಧೀಕರಿಸುವುದು ಹಾಗೂ ಪ್ರಗತಿ ವರದಿಗಳನ್ನು ನಿಗಧಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.
3. ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯುವುದು.
4. ಕಾಮಗಾರಿಗಳ ಅನುಷ್ಠಾನದಲ್ಲಿ ಕಡ್ಡಾಯವಾಗಿ KTPP ಕಾಯ್ದೆಯನ್ನು ಪಾಲಿಸತಕ್ಕದ್ದು.
5. ಕಾಮಗಾರಿಗಳ ವಿವರಗಳನ್ನು ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ವಿವರ ಹಾಗೂ ಛಾಯಾಚಿತ್ರಗಳನ್ನು ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸುವುದು.
6. ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನಕ್ಕೆ 31ನೇ ಮಾರ್ಚ್ 2023ರ ಅಂತ್ಯದೊಳಗೆ ವ್ಯಪಗತವಾಗದಂತೆ ಪೂರ್ಣ ಪ್ರಮಾಣದಲ್ಲಿ ವೆಚ್ಚ ಭರಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ತಪ್ಪದೆ ಸಲ್ಲಿಸುವುದು.
7. ಈ ಅನುದಾನವನ್ನು ಜಿಲ್ಲಾ ವಲಯ ಲೆಕ್ಕ ಶೀರ್ಷಿಕೆ:2515-00-101-0-29 (ಲಿಂಕ್ ಕೋಡ್:2515-00-196-1-14) ರಡಿ ಭರಿಸುವುದು.



Generated from eOffice by sateesh kumar k n, KPRC-SDA(SKN), SECOND DIVISION ASSISTANT, KPRC on 13/04/2023 04:36 PM

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2022, ದಿನಾಂಕ:03.01.2023ರಲ್ಲಿ ಸಂಬಂಧಿಸಿದ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಂ. ಎಂ. [signature] 8/3/2023
(ಎಂ.ಎಂ.ರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.
4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆ.ಜಿ ರಸ್ತೆ, ಬೆಂಗಳೂರು.
5. ನಿರ್ದೇಶಕರು(ಅಭಿವೃದ್ಧಿ), ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆ.ಜಿ ರಸ್ತೆ, ಬೆಂಗಳೂರು.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8. ವಿಶೇಷಾಧಿಕಾರಿ(ಆರ್ಥಿಕ ಸುಧಾರಣಾ ಹಾಗೂ ಗಣಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
10. ಮುಖ್ಯ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ, ಕರ್ನಾಟಕ ವಿಕಾಸ- ಪತ್ರಿಕೆಯಲ್ಲಿ ಪ್ರಕಟಿಸಲು.
11. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ- ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ.



Generated from eOffice by sateesh kumar k n, KPRC-SDA(SKN), SECOND DIVISION ASSISTANT, KPRC on 13/04/2023 04:36 PM

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಹಿರಿಯ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಬಿ & ಆರ್) ರವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಜಂಟಿ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕ.
6. ನಿರ್ದೇಶಕರು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕ.



Generated from eOffice by sateesh kumar k n, KPRC-SDA(SKN), SECOND DIVISION ASSISTANT, KPRC on 13/04/2023 04:36 PM

# ಅನುಬಂಧ

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆಯ ಹೆಸರು | ಜಿಲ್ಲೆಯ ಕೋಡ್ | ಡಿಡಿಓ ಕೋಡ್ | 2022-23ನೇ ಸಾಲಿಗೆ ನಿಗದಿಪಡಿಸಿದ ಒಟ್ಟು ಅನುದಾನ (ರೂ.ಗಳು ಲಕ್ಷಗಳಲ್ಲಿ) | ಈವರೆಗೆ ಬಿಡುಗಡೆಯಾಗಿರುವ ಅನುದಾನ | | | ಬಿಡುಗಡೆಗೊಳಿಸಲಾದ ಅನುದಾನ | |
|---|---|---|---|---|---|---|---|---|---|
| | | | | | 1ನೇ ಕಂತಿನ ಅನುದಾನ | 2ನೇ ಕಂತಿನ ಅನುದಾನ | 3ನೇ ಕಂತಿನ ಅನುದಾನ | 3ನೇ ಕಂತಿನ ಅನುದಾನ | 4ನೇ ಕಂತಿನ ಅನುದಾನ |
| 1 | ಬಾಗಲಕೋಟೆ | 461 | 279790 | 170.00 | 42.50 | 42.50 | 42.50 | - | 42.50 |
| 2 | ಬೆಂಗಳೂರು (ಗ್ರಾ) | 402 | 27975D | 200.00 | 50.00 | 50.00 | 50.00 | - | 50.00 |
| 3 | ಕಲಬುರಗಿ | 417 | 334650 | 75.00 | 18.75 | 18.75 | 18.75 | - | 18.75 |
| 4 | ಶಿವಮೊಗ್ಗ | 405 | 27983D | 55.00 | 13.75 | 13.75 | 13.75 | - | 13.75 |
| 5 | ಉಡುಪಿ | 457 | 27978D | 100.00 | 25.00 | 25.00 | 25.00 | - | 25.00 |
| 6 | ವಿಜಯಪುರ | 414 | 279900 | 350.00 | 87.50 | 87.50 | 87.50 | - | 87.50 |
| 7 | ಬಳ್ಳಾರಿ | 418 | 279910 | 206.00 | 51.50 | 51.50 | - | 51.50 | 51.50 |
| 8 | ಬೆಳಗಾವಿ | 413 | 279670 | 270.00 | 67.50 | 67.50 | - | 67.50 | 67.50 |
| 9 | ಬೆಂಗಳೂರು (ನಗರ) | 401 | 27980D | 100.00 | 25.00 | 25.00 | - | 25.00 | 25.00 |
| 10 | ಬೀದರ್ | 419 | 334670 | 60.00 | 15.00 | 15.00 | - | 15.00 | 15.00 |
| 11 | ಚಾಮರಾಜ ನಗರ | 456 | 279950 | 60.00 | 15.00 | 15.00 | - | 15.00 | 15.00 |
| 12 | ಚಿಕ್ಕಬಳ್ಳಾಪುರ | 453 | 27994D | 100.00 | 25.00 | 25.00 | - | 25.00 | 25.00 |
| 13 | ಚಿಕ್ಕಮಗಳೂರು | 408 | 27986D | 65.00 | 16.25 | 16.25 | - | 16.25 | 16.25 |
| 14 | ಚಿತ್ರದುರ್ಗ | 403 | 279810 | 85.00 | 21.25 | 21.25 | - | 21.25 | 21.25 |
| 15 | ದಕ್ಷಿಣ ಕನ್ನಡ | 409 | 279870 | 260.00 | 65.00 | 65.00 | - | 65.00 | 65.00 |
| 16 | ದಾವಣಗೆರೆ | 451 | 27977D | 230.00 | 57.50 | 57.50 | - | 57.50 | 57.50 |
| 17 | ಧಾರವಾಡ. | 415 | 333200 | 130.00 | 32.50 | 32.50 | - | 32.50 | 32.50 |
| 18 | ಗದಗ | 462 | 279720 | 100.00 | 25.00 | 25.00 | - | 25.00 | 25.00 |
| 19 | ಹಾಸನ | 410 | 27976D | 200.00 | 50.00 | 50.00 | - | 50.00 | 50.00 |
| 20 | ಹಾವೇರಿ | 463 | 27973D | 150.00 | 37.50 | 37.50 | - | 37.50 | 37.50 |
| 21 | ಕೊಡಗು | 411 | 279880 | 150.00 | 37.50 | 37.50 | - | 37.50 | 37.50 |
| 22 | ಕೋಲಾರ | 404 | 279820 | 200.00 | 50.00 | 50.00 | - | 50.00 | 50.00 |
| 23 | ಕೊಪ್ಪಳ | 466 | 27966D | 200.00 | 50.00 | 50.00 | - | 50.00 | 50.00 |
| 24 | ಮಂಡ್ಯ | 412 | 27989D | 80.00 | 20.00 | 20.00 | - | 20.00 | 20.00 |
| 25 | ಮೈಸೂರು | 407 | 27985D | 85.00 | 21.25 | 21.25 | - | 21.25 | 21.25 |
| 26 | ರಾಯಚೂರು | 420 | 279920 | 333.00 | 83.25 | 83.25 | - | 83.25 | 83.25 |
| 27 | ರಾಮನಗರ | 452 | 279930 | 115.00 | 28.75 | 28.75 | - | 28.75 | 28.75 |
| 28 | ತುಮಕೂರು | 406 | 27984D | 130.00 | 32.50 | 32.50 | - | 32.50 | 32.50 |
| 29 | ಉತ್ತರಕನ್ನಡ | 416 | 27974D | 65.00 | 16.25 | 16.25 | - | 16.25 | 16.25 |
| 30 | ಯಾದಗಿರಿ | 421 | 334660 | 100.00 | 25.00 | 25.00 | - | 25.00 | 25.00 |
| 31 | ವಿಜಯನಗರ | 467 | 196670 | 275.00 | 68.75 | 68.75 | - | 68.75 | 68.75 |
| | ಒಟ್ಟು | | | **4699.00** | **1174.75** | **1174.75** | **237.50** | **937.25** | **1174.75** |



Generated from eOffice by sateesh kumar k n, KPRC-SDA(SKN), SECOND DIVISION ASSISTANT, KPRC on 13/04/2023 04:36 PM